ಪದಬಂಧ



ಎಡದಿಂದ ಬಲಕ್ಕೆ :

1. ಸೋದರನ ಕೋಪ ತಗ್ಗಿಸಲು ಹೊಸದೊಂದು ಒಡಂಬಡಿಕೆ (3)
3. ವಂಚಕರಿಂದ ಕಾಪಾಡಲು ತಕ್ಕ ಉಡುಪು (3)
4. ಜಾಣನಿಗೆ ಮಾತ್ರ ಕಾಣಬಹುದೇ ಈ ಹಕ್ಕಿ? (3)
6. ಪರಿಹಾರ ಕೋರಿ ಬಂದವರಿಗೆಲ್ಲ ಸಿಕ್ಕಿದ್ದು ಕೆಲಸದ ಸಾಮಗ್ರಿ (4)
7. ಭ್ರಮೆ ಮೂಡಿಸುವ ಸಂದರ್ಭವೇ ಆದರೂ ಸಡಗರಪಡು (4)
9. ಕೊಳಗದಂಥ ಅಳತೆಯ ಬಳಕೆ, ಕಳೆದು ಹೋದ ಸಮಯದ್ದು (4)
11. ಜನರ ಕ್ಷೇಮ ಸಾಧ್ಯ ಎಲ್ಲಿ ? ನೀರಿಗೇ ತೀವ್ರ ಬರ ಬಂದಿದೆಯಲ್ಲ ? (4)
15. ನಗು ನಗುತ್ತಲೇ ಎತ್ತರೆತ್ತರಕ್ಕೆ ಇದೆಂಥ ಹಾರಾಟ ! (3)
16. ಸಿಕ್ಕಿದ ಚೂರುಗಳನ್ನೇ ಜೋಡಿಸಿ ರೂಪಿಸಿದ್ದು ಈ ನಿರ್ಮಿತಿ (3)
17. ಅಪರಿಚಿತರಿಗೆ ಕೊಟ್ಟ ಹಣವನ್ನು ಹಿಂಪಡೆಯುವುದು ಸುಲಭವಲ್ಲ (3)

ಮೇಲಿಂದ ಕೆಳಕ್ಕೆ :

1. ಯೋಚಿಸುವಂತೆಯೇ ಇಲ್ಲ, ಸಂಪೂರ್ಣವಾಗಿದೆ ಶೇಖರಣೆ (3)
2. ಶಿಕ್ಷೆಯನ್ನು ತಪ್ಪಿಸಲು ನೆರವಾದದ್ದು ಇದೇ ಭೂಪಟ (3)
3. ಕಂಕಣವನ್ನು ತಯಾರಿಸಲು ತಕ್ಕ ಲೋಹ ಗೊತ್ತೇ ? (3)
5. ಮಣಭಾರವನ್ನು ಹೊತ್ತು ಸುತ್ತುವುದೇ ತಲೆಕೆಳಗು (3)
6. ಇಡೀ ಗುಂಪನ್ನೇ ಬೆದರಿಸಿತು ಭಾರೀ ಸರ್ಪ ! (3)
8. ಸುಂದರ ಮನೆಗೆ ಕೃಷ್ಣನ ಆಪ್ತ ಮಿತ್ರನದೇ ಹೆಸರು (3)
10. ಮುಖ ಚಹರೆಯನ್ನೇ ಬದಲಿಸಬೇಕೆಂಬ ಆಸೆ, ಹಂಬಲ (3)
12. ನೆಲವನ್ನೆಲ್ಲ ಹೇಗೆ ಸಿಂಗರಿಸಿದ್ದಾಳೆ ನೋಡಿ ಆ ಮಹಿಳೆ (3)
13. ಆತನ ಪ್ರಥಮ ಕಾರ್ಯವೇ ಮಹಾ ಪಾಪದ ಕೆಲಸ (3)
14. ಚೂರ್ಣದ ಸಾಮಗ್ರಿ ಸಂಗ್ರಹಿಸಲು ಅಡವಿಯಲ್ಲಿ ಪಾದಯಾತ್ರೆ (3)

## 01-03-2018ರ ಉತ್ತರಗಳು

ಎಡದಿಂದ ಬಲಕ್ಕೆ :

1. ಉಪಮಾನ ; 3. ಪ್ರಮಾದ ; 4. ಕುಕ್ಕುಟ ; 6. ರಸಾತಲ .
7. ಅತ್ಯುನ್ನತ ; 9. ಕಾಲುಭಾಗ ; 11. ಸದಾಚಾರ ; 13. ನವನೀತ;
15. ಮಹನೀಯ ; 17. ರಮಣಿ ; 18. ಯಾಚನೆ ; 19. ಸುರಪತಿ

ಮೇಲಿಂದ ಕೆಳಕ್ಕೆ :

1. ಉದರ ; 2. ನಕುಲ ; 3. ಪ್ರಸನ್ನ ; 5. ಟಪಾಲು ;
7. ಅವಿಶ್ವಾಸ ; 8. ತಳವಾರ ; 9. ಕಾರಕೂನ ; 10. "ಗಭಂಪೋತ"
( = ತಪೋಭಂಗ ತಲೆಕೆಳಗು ) 12. ಚಾದರ ; 14. ವರ್ಣನೆ
15. ಮಣಿಸು ; 16. ಯಯಾತಿ

ಪ್ರಶ್ನಾಂಕಣ

# ವಿದೂಷಕ ಮೀನು: ವಿಶೇಷ ಏನು?

ಈ ಮೀನಿನ ಮೊದಲ ವಿಶೇಷ ಅದರ ರೂಪಾನ್ವಯ ಹೆಸರು. ಸರ್ಕಸ್‌ಗಳಲ್ಲಿ ಬರುವ ವಿಚಿತ್ರ ವೇಷದ, ನಗೆಯುಕ್ಕಿಸುವ ಚಲನವಲನಗಳ 'ವಿದೂಷಕ'ರಂತೆಯೇ ಈ ಮೀನಿನ ರೂಪ ಕೂಡ (ಚಿತ್ರಗಳಲ್ಲಿ ಗಮನಿಸಿ). ಗರಿಷ್ಠ ಆರು ಅಂಗುಲ ಮತ್ತು ಕನಿಷ್ಠ ಮೂರು ಅಂಗುಲ ಉದ್ದದ ಈ ಪುಟ್ಟ ಮತ್ಸ್ಯ ವಿಧದಲ್ಲಿ ಮುವ್ವತ್ತು ಪ್ರಭೇದಗಳಿವೆ. ಅವುಗಳದು ಹಳದಿ, ಕಿತ್ತಳೆ, ಕೆಂಪು, ಕಪ್ಪು ಅಥವಾ ಬಿಳುಪಿನ ಪಟ್ಟೆಗಳ ಮತ್ತು ತೇಪೆಗಳ ಗಾಢ ವರ್ಣಗಳ ಅಲಂಕಾರ.

ವಿದೂಷಕ ಮೀನಿನ ದ್ವಿತೀಯ ವಿಶೇಷ ಅದರ ಜೀವನ ಕ್ರಮ. ಕಡಿಮೆ ಆಳದ ಕಡಲ ನೆಲದಲ್ಲಿ ಹರಡಿದ ಹವಳದ ದಿಬ್ಬಗಳೇ ಈ ಮತ್ಸ್ಯಗಳ ನೆಲೆ. ಅಲ್ಲೂ ಹವಳದ ದಿಬ್ಬಗಳಿಗೆ ಕಚ್ಚಿ ನಿಂತು ಅರಳಿ ಬೆಳೆವ 'ಕಡಲ ಆನಿಮೋನಿ'ಗಳ ರಕ್ಷಣೆಯಲ್ಲಿ ಅವುಗಳ ಬದುಕು (ಚಿತ್ರ2). ವಾಸ್ತವವಾಗಿ ಈ ಎರಡೂ ಬಗೆಗಳ ಪ್ರಾಣಿಗಳದು ಆಹಾರ ಗಳಿಕೆಗೂ, ಆತ್ಮ ರಕ್ಷಣೆಗೂ ಪರಸ್ಪರ ಅವಲಂಬನೆಯ ಅನ್ಯೋನ್ಯ ಜೀವನ ! ವಿಷಕರ ಪ್ರಾಣಿಯಾದ ಕಡಲ ಆನಿಮೋನಿಯ ನೂರಾರು 'ಚಾಚು ಕೈ'ಗಳ ನಡುವೆ ನೆಲೆಸುವ ವಿದೂಷಕ ಮೀನುಗಳನ್ನು ಇತರ ಬೇಟೆಗಾರ ಮತ್ಸ್ಯಗಳು ಹಿಡಿಯಲು ಬರುವುದಿಲ್ಲ (ಆನಿಮೋನಿಯ ವಿಷವನ್ನು ನಿರೋಧಿಸುವ ಗುಣ ವಿದೂಷಕ ಮತ್ಸ್ಯಗಳಿಗಿದೆ ). ಅದಕ್ಕೆ ಪ್ರತ್ಯುಪಕಾರವಾಗಿ ಆನಿಮೋನಿಯನ್ನು ಆಶ್ರಯಿಸಲು ಬರುವ ಪರಾವಲಂಬಿಗಳನ್ನು ಮತ್ತು ಕಚ್ಚಿ ತಿನ್ನಲು ಬರುವ ಬೇಟೆಗಾರರನ್ನು ವಿದೂಷಕ ಮೀನುಗಳು ದೂರ ಇರಿಸುತ್ತವೆ. ಆನಿಮೋನಿ ತಿಂದುಳಿದ ವಸ್ತುಗಳು ವಿದೂಷಕ ಮೀನುಗಳಿಗೆ ಆಹಾರವಾಗುತ್ತದೆ. ಅದಕ್ಕೆ ಪ್ರತಿಯಾಗಿ ವಿದೂಷಕ ಮೀನುಗಳ ವಿಸರ್ಜನೆಗಳಲ್ಲಿ ಲಭಿಸುವ ಸಾರಜನಕ ಆನಿಮೋನಿಯ ಬೆಳವಣಿಗೆಗೆ ಉತ್ತಮ




ಪೋಷಕಾಂಶವಾಗುತ್ತದೆ. ಎಂಥ ಪರಸ್ಪರಾವಲಂಬನೆ !

ವಿದೂಷಕ ಮೀನುಗಳ ಮತ್ತೂ ಒಂದು ಪರಮ ವಿಶೇಷ ಇದೆ. ಈ ಮೀನುಗಳೆಲ್ಲ ಜನಿಸುವಾಗ ಗಂಡುಗಳೇ ಆಗಿರುತ್ತವೆ. ವಯಸ್ಕ ಹಂತ ತಲುಪಿದಾಗ ಹತ್ತಾರು ಸದಸ್ಯರ ಪ್ರತಿ ಗುಂಪಿನಲ್ಲೂ ಅತ್ಯಂತ ಶಕ್ತ ಗಂಡು ಹೆಣ್ಣಾಗಿ ಪರಿವರ್ತನೆಗೊಳ್ಳುತ್ತದೆ ! ಉಳಿದೆಲ್ಲ ಗಂಡುಗಳಲ್ಲೂ ಅತ್ಯಂತ ಬಲಯುತವಾದ ಮೀನು ಮಾತ್ರ ಹೆಣ್ಣಿನೊಡನೆ ಸಂತಾನ ಬೆಳೆಸುತ್ತದೆ. ಹೆಣ್ಣು ಮೀನು ಸತ್ತೊಡನೆ ಅತಿ ಹಿರಿಯ ಗಂಡು ಹೆಣ್ಣಾಗುತ್ತದೆ !

ಪುಟ್ಟ ಗಾತ್ರ ಮತ್ತು ಗಾಢ ವರ್ಣಗಳ ವಿಸ್ಮಯ ರೂಪದಿಂದಾಗಿ ವಿದೂಷಕ ಮೀನುಗಳು ಮನೆ, ಕಚೇರಿಗಳ ಮತ್ಸ್ಯಾಗಾರಗಳಲ್ಲೂ ಅತ್ಯಂತ ಜನಪ್ರಿಯ. ಜಗದಾದ್ಯಂತ ಅವುಗಳಿಗೆ ಎಷ್ಟು ಬೇಡಿಕೆ ಇದೆಯೆಂದರೆ ಹೀಗೆ ಪ್ರದರ್ಶಿಸಲ್ಪಡುತ್ತಿರುವ ಅಲಂಕಾರಿಕ ಮೀನುಗಳ ಒಟ್ಟೂ ಸಂಖ್ಯೆಯ ಶೇ.43 ಭಾಗ ಈ ಮೀನುಗಳದೇ ಆಗಿದೆ. ಹಾಗಾಗಿರುವುದೂ ಈ ಮತ್ಸ್ಯಗಳದೇ ಇನ್ನೊಂದು ವಿಶೇಷ.

■ ಎನ್. ವಾಸುದೇವ್